**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ತೋಟಗಾರಿಕೆ ಅಧೀಕ್ಷಕರು(ಪೂರ್ವ ವಲಯ) ರವರ ಕಛೇರಿ, 17ನೇ ಮಹಡಿ, ಪಿ..ಯು ಕಟ್ಟಡ,**
**ಎಂ.ಜಿ.ರಸ್ತೆ, ಮೇಯೊಹಾಲ್ ಬೆಂಗಳೂರು.**

ಸಂಖ್ಯೆ : ತೋ.ಅ(ಪೂ)/৭৭3/2020-21 ದಿನಾಂಕ : 6/1/2021

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ -117 ಶಾಂತಿನಗರದ ವಾರ್ಡ್ ಸಮಿತಿ ಸಭೆಯನ್ನು, ಕೆನೋಪಿ ರೆಸ್ಟೋರೆಂಟ್, ಪಿ.ಯು.ಕಟ್ಟಡ ಎಂ.ಜಿ.ರಸ್ತೆ, ಬೆಂಗಳೂರು ಇಲ್ಲಿ ದಿನಾಂಕ : 06-01-2021 ರಂದು ಮಧ್ಯಾಹ್ನ 2:00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು.**

**ಸಭೆಗೆ ಹಾಜರಿದ್ದ ಸದ್ಯಸರು ಹಾಗೂ ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದ್ಯಸರ ಹೆಸರುಗಳು |
|---|---|
| 1 | ಶ್ರೀ. ಸಂತೋಷ್ ಕುಮಾರ್, ನೋಡಲ್ ಅಧಿಕಾರಿ (ಶಾಂತಿನಗರ 117) ಹಾಗೂ ತೋಟಗಾರಿಕೆ ಅಧೀಕ್ಷಕರು (ಪೂರ್ವ ವಲಯ) |
| 2 | ಶ್ರೀ.ಮಧು ಆರ್, ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ. |
| 3 | ಶ್ರೀಮತಿ.ಎಂ. ಫರ್ಜಾನಾ, ಸಹಾಯಕ ಅಭಿಯಂತರರು (ಶಾಂತಿನಗರ), ವಾರ್ಡ್ ಕಮಿಟಿ ಕಾರ್ಯದರ್ಶಿ. |
| 4 | ಶ್ರೀ.ಪುಟ್ಟಸ್ವಾಮಿ, ಹಿರಿಯ ಆರೋಗ್ಯ ಪರಿವೀಕ್ಷಕರು, (ಶಾಂತಿನಗರ) |
| 5 | ಶ್ರೀ.ಅಭಿಷೇಕ್, ಕಿರಿಯ ಆರೋಗ್ಯ ಪರಿವೀಕ್ಷಕರು, (ಶಾಂತಿನಗರ) |
| 6 | ಶ್ರೀ ಬಸವರಾಜ, ಸಹಾಯಕ ಕಂದಾಯ ಅಧಿಕಾರಿಗಳು, ಶಾಂತಿನಗರ |
| 7 | ಶ್ರೀ.ಈಶ್ವರ್, ಕಂದಾಯ ಪರಿವೀಕ್ಷಕರು,(ಶಾಂತಿನಗರ) |
| 8 | ಶ್ರೀ.ಷರೀಫ್, ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ,ಶಾಂತಿನಗರ ವಿಭಾಗ |
| 9 | ಶ್ರೀಮತಿ.ಶಿಲ್ಪಾ, ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ (ಶಾಂತಿನಗರ) |
| 10 | ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, |
| 11 | ಶ್ರೀ ಅಕ್ರಮ್ ಪಾಷಾ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 12 | ಶ್ರೀ ಸ್ಟಾನ್ಲೆ ಜೋನ್ಸ್, ಸಹಾಯಕ ಅಭಿಯಂತರರು, ಬೆಸ್ಕಾಂ. |
| 13 | ಶ್ರೀಮತಿ.ಅಶ್ವಿನಿ, ಅಶೋಕನಗರ, ಲಾ & ಆರ್ಡರ್, ಪೋಲೀಸ್ ಇಲಾಖೆ |
| 14 | ಶ್ರೀಮತಿ ಸರಿತಾ, ಸದ್ಯಸರು (ಶಾಂತಿನಗರ) |
| 15 | ಶ್ರೀ ಆರ್.ಪುಷೋತ್ತಮ್, ಸದ್ಯಸರು (ಶಾಂತಿನಗರ) |
| 16 | ಶ್ರೀ ಎಸ್.ಎನ್.ರಾಜು, ಸದ್ಯಸರು (ಶಾಂತಿನಗರ) |
| 17 | ಶ್ರೀ ವೆಂಕಟೇಶ್.ಎಂ, ಸದ್ಯಸರು (ಶಾಂತಿನಗರ) |
| 18 | ಶ್ರೀ ಜಗದೀಶ್.ಎಂ, ಸದ್ಯಸರು (ಶಾಂತಿನಗರ) |
| 19 | ಶ್ರೀ ಇಸ್ಮಾಯಿಲ್ ಮಿರ್ಜಾ, ಸದ್ಯಸರು (ಶಾಂತಿನಗರ) |

Scanned with CamScanner

ಸ್ಥಳೀಯ ಶಾಸಕರಾದ, ಸನ್ಮಾನ್ಯ ಶ್ರೀ ಎನ್.ಎ. ಹ್ಯಾರಿಸ್, ರವರ ಅಧ್ಯಕ್ಷತೆಯಲ್ಲಿ ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸುತ್ತಾ ಮುಖ್ಯ ವಿಷಯದ ಬಗ್ಗೆ ಚರ್ಚಿಸಲು ತಿಳಿಸಿದರು.

ಸಮಿತಿ ಅಧ್ಯಕ್ಷರು ಮಾತನಾಡುತ್ತಾ ದಿನಾಂಕ : 09-12-2020ರಂದು ನಡೆದ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತಾ, ಶ್ರೀ ಸಂತೋಷ್ ಕುಮಾರ್, ವಾರ್ಡಿನ ನೋಡಲ್ ಅಧಿಕಾರಿಯವರು ಸಭೆಯನ್ನು ಹಿಂದಿನ ಸಭೆಯ ನಡುವಳಿಗಳನ್ನು ಚರ್ಚಿಸುತ್ತಾ ಸಭೆಯನ್ನು ಪ್ರಾರಂಭಿಸಿದರು.

| ಕ್ರಮ ಸಂಖ್ಯೆ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| ❖ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) | |
| 1 | ಕಾಮಗಾರಿ ಇಲಾಖೆ (Engineering Department) | |
| | ➧ ಶ್ರೀ ಇಸ್ಮಾಯಿಲ್ ಮಿರ್ಜಾ, ಸದ್ಯಸರು (ಶಾಂತಿನಗರ) ಮಾತನಾಡುತ್ತಾ – ಲಕ್ಷ್ಮಿ ರಸ್ತೆ, 9ನೇ ಅಡ್ಡರಸ್ತೆಯಲ್ಲಿ ರಸ್ತೆ ಡಾಂಭರೀಕರಣ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಕೋರಿದರು, ಅದರಂತೆ ಸಹಾಯಕ ಅಭಿಯಂತರರಾದ, ಶ್ರೀಮತಿ. ಫರ್ಜಾನಾ.ಎಂ.ರವರು ಈಗಾಗಲೇ ಸದರಿ ರಸ್ತೆಗೆ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರು ನೇಮಿಸಲಾಗಿದ್ದು, ಸದರಿ ಗುತ್ತಿಗೆದಾರರ ವತಿಯಿಂದ ಕೆಲಸವನ್ನು ನಿರ್ವಹಿಸುವುದಾಗಿ ತಿಳಿಸಿದರು.– ದಿನಾಂಕ:– 26-11-2020 ರ ಸಭೆಯ ನಡವಳಿಯಲ್ಲಿ ಚರ್ಚಿಸಿದ ವಿಷಯ–ಬಗೆಹರಿದಿರುವುದಿಲ್ಲ.<br>➧ ಶ್ರೀ ಜಗದೀಶ್, ಸದ್ಯಸರು (ಶಾಂತಿನಗರ) ಮಾತನಾಡುತ್ತಾ, ಅಕ್ಕಿತಿಮ್ಮನಹಳ್ಳಿ ಪ್ರದೇಶ ವ್ಯಾಪ್ತಿಯಲ್ಲಿ ಕಾಂಕ್ರೀಟ್ ಪ್ಯಾಚ್ ವರ್ಕ್ (ರಸ್ತೆಗುಂಡಿ) ಯನ್ನು ಸರಿ ಪಡಿಸಲು ತಿಳಿಸಲಾಗಿ, ಅದರಂತೆ ಸಹಾಯಕ ಅಭಿಯಂತರರಾದ ಶ್ರೀಮತಿ.ಫರ್ಜಾನಾ.ಎಂ.ರವರು ಸದರಿ ರಸ್ತೆಗೆ ರಸ್ತೆ ಗುಂಡಿ ಸರಿಪಡಿಸಲು ಸೂಕ್ತ ಕ್ರಮವಹಿಸುವುದಾಗಿ ತಿಳಿಸಿದರು. –ದಿನಾಂಕ:– 26-11-2020 ರ ಸಭೆಯ ನಡವಳಿಯಲ್ಲಿ ಚರ್ಚಿಸಿದ ವಿಷಯ–ಬಗೆಹರಿದಿರುವುದಿಲ್ಲ.<br>➧ ಶ್ರೀ ಇಸ್ಮಾಯಿಲ್ ಮಿರ್ಜಾ, ಸದ್ಯಸರು (ಶಾಂತಿನಗರ) ಮಾತನಾಡುತ್ತಾ– ಫುಡ್ ಗೋಡೌನ್ ರಸ್ತೆಯಲ್ಲಿರುವ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖಾ ವತಿಯಿಂದ ಆಹಾರ ಸರಬರಾಜು ಗೋದಾಮು ಕಾರ್ಯನಿರ್ವಹಿಸುತ್ತಿದ್ದು, ಸದರಿ ಗೋದಾಮಿಗೆ ಭಾರಿ ವಾಹನಗಳು ಆಹಾರವನ್ನು ಸರಬರಾಜು ಮಾಡಲು ಸಂಚರಿಸಲಾಗುತ್ತಿದ್ದು, ರಸ್ತೆಗಳನ್ನು ಹಾನಿ ಮಾಡುತ್ತರುವುದರಿಂದ ಸದರಿ ಗೋದಾಮನ್ನು ಮುಚಿಸಲು ಕೋರಲಾಗಿ, ಸಹಾಯಕ ಅಭಿಯಂತರರಾದ ಶ್ರೀಮತಿ.ಫರ್ಜಾನಾ.ಎಂ.ರವರು ಸಂಬಂದಪಟ್ಟ ಇಲಾಖೆಯವರಿಗೆ ಪತ್ರವನ್ನು ಬರೆದು ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.<br>➧ ಶ್ರೀಮತಿ ಪಿ.ಸೌಮ್ಯ, ಸದ್ಯಸರು (ಶಾಂತಿನಗರ) ರವರು ತಮ್ಮ ಪತ್ರದಲ್ಲಿ– ಜೆ.ಕೆ.ಪುರ ಮುಖ್ಯರಸ್ತೆಯ ವಿನಾಯಕನಗರದಲ್ಲಿನ ಅನಧಿಕೃತ ಷಡ್ಡನ್ನು ತೆರವುಗೊಳಿಸಲು ಕೋರಿರುತ್ತಾರೆ.<br>➧ CWA ಈಗಲ್ ಸ್ಟ್ರೀಟ್ ಮತ್ತು ಬರ್ಲಿ ಸ್ಟ್ರೀಟ್ ರಸ್ತೆಯ ಜಂಕ್ಷನ್‌ನಲ್ಲಿರುವ Bay berry apartments ಗೆ ಬೇಲಿ ಹಾಕಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. | AEE (SN)<br>AE,Ward-117<br>BBMP |

Scanned with CamScanner

| | | |
|---|---|---|
| | ➡ ಶ್ರೀ ವಿಲಿಯಮ್ ರಾಜೀವ್, ರವರು ತಮ್ಮ ಪತ್ರದಲ್ಲಿ- ವಾಲ್ಕರ್ ಲೇನ್‌ನಲ್ಲಿ ನಡೆಯುತ್ತಿರುವ ಕಾಮಗಾರಿ ಸ್ಥಗಿತಗೊಂಡಿರುವುದಾಗಿ ತಿಳಿಸಿರುತ್ತಾರೆ, ಕೆಲವು ಡ್ರೈನ್ ಸ್ಲಾಬ್‌ಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.<br>➡ ನಾರಿಸ್ ರಸ್ತೆಯಲ್ಲಿ ಪಾಟ್‌ಹೋಲ್ ಮುಚ್ಚಲು ಕೋರಿರುತ್ತಾರೆ.<br>➡ ಲ್ಯಾಂಗ್‌ಫೋರ್ಡ್ ರಸ್ತೆ ಮತ್ತು ನಾರಿಸ್ ರಸ್ತೆ ಜಂಕ್ಷನ್‌ನಲ್ಲಿ ಕಟ್ಟಡ ಸಾಮಾಗ್ರಿಗಳನ್ನು ಶೇಖರಣೆಯಾಗಿದ್ದು, ಓಡಾಡಲು ತೊಂದರೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ.<br>➡ ಶ್ರೀ ಮುನಿಕೃಷ್ಣ, ರವರು ತಮ್ಮ ಪತ್ರದಲ್ಲಿ- ಘುಡ್‌ಗೊದಾಮು ರಸ್ತೆ ಡಾಂಬರೀಕರಣದ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.<br>➡ ಶ್ರೀ ಶಿವಕುಮಾರ ರವರು ತಮ್ಮ ಪತ್ರದಲ್ಲಿ – ಜೆ.ಕೆ.ಪುರ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ಹಾಕಿರುವ ಬೇಲಿಯನ್ನು ತೆರವುಗೊಳಿಸಲು ಕೋರಿರುತ್ತಾರೆ.<br>➡ ವಿನಾಯಕನಗರ ದಿಂದ ಶಾಂತಿನಗರಕ್ಕೆ ಸಂಪರ್ಕ ಕಲ್ಪಿಸಿರುವ ರಸ್ತೆ ಒತ್ತುವರಿಯಾಗಿರುವುದಾಗಿ ತಿಳಿಸಿರುತ್ತಾರೆ. | AEE (SN)<br>AE,Ward-117<br>BBMP |
| 2 | ಬೆಸ್ಕಾಂ ಇಲಾಖೆ **(Bescom Department)** | |
| | ➡ ಸಾರ್ವಜನಿಕರ ದೂರು : ಕರ್ಲಿ ರಸ್ತೆಯಲ್ಲಿರುವ ಒಣಗಿದ ಮರವೊಂದು ಟ್ರಾನ್ಸ್ಫಾರ್ಮರ್ ಮೇಲೆ ಭಾಗಿದ್ದು ಕೋರಲಾಗಿ, ಇದನ್ನು ಶ್ರೀ ಸ್ಟಾನ್ಲೆ ಜೋನ್ಸ್ ಸಹಾಯಕ ಅಭಿಯಂತರರು,(ಬೆಸ್ಕಾಂ) ರವರು ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ದಿನಾಂಕ:-26-11-2020 ರ ಸಭೆಯ ನಡವಳಿಯಲ್ಲಿ ಚರ್ಚಿಸಿದ ವಿಷಯ-ಬಗೆಹರಿದಿರುವುದಿಲ್ಲ. | AEE & A.E<br>(Bescom) |
| 3 | ಬಿ.ಡಬ್ಲ್ಯೂ.ಎಸ್.ಎಸ್.ಬಿ **(BWSSB)** | |
| | ➡ ಶ್ರೀ ಶ್ರೀನಿವಾಸ್ ಮೂರ್ತಿರವರು ತಮ್ಮ ಪತ್ರದಲ್ಲಿ – ವೆಲ್ಲಿಂಗ್‌ಟನ್ ರಸ್ತೆಯಲ್ಲಿ ಒಳಚರಂಡಿ ಪೈಪ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.<br>➡ ಶ್ರೀ ಜೋಸೆಫ್ ರವರು ಮಾತನಾಡುತ್ತಾ- ಈಗಲ್ ಸ್ಟ್ರೀಟ್ ರಸ್ತೆಯಲ್ಲಿ ಒಳಚರಂಡಿ ಪೈಪ್‌ಗಳ ದುರಸ್ಥಿ ಬಗ್ಗೆ.<br>➡ ಶ್ರೀಮತಿ ಹುಸ್ನಾ ಫಾತೀಮಾ ರವರು ತಮ್ಮ ಪತ್ರದಲ್ಲಿ – ಬರ್ಲಿಸ್ಟ್ರೀಟ್ ಅಡ್ಡರಸ್ತೆಯಲ್ಲಿ ಕುಡಿಯುವ ನೀರಿನ ಸರಬರಾಜು ಸ್ಥಗಿತಗೊಂಡಿರುವ ಬಗ್ಗೆ ತಿಳಿಸಿದರು.<br>➡ ಶ್ರೀ ವಿಲಿಯಮ್ ರಾಜೀವ್, ರವರು ತಮ್ಮ ಪತ್ರದಲ್ಲಿ – ವಾಲ್ಕರ್ ಲೇನ್ ರಸ್ತೆಯಲ್ಲಿ ಒಳಚರಂಡಿ ಹಾಗೂ ಇತರೆ ದೂರುಗಳ ಬಗ್ಗೆ.<br>➡ ಶ್ರೀ ಆನಂದ್ ಅರ್ನಿ ರವರು ತಮ್ಮ ಪತ್ರದಲ್ಲಿ – ಅಲೆಕ್ಸಾಂಡರ್ ರಸ್ತೆಯಲ್ಲಿ ಒಳಚರಂಡಿ ಪೈಪ್‌ಗಳ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ. | AEE & A.E<br>(BWSSB) |
| 4 | ವಿದ್ಯುತ್ ಇಲಾಖೆ | |
| | ➡ ಶ್ರೀ ಗೋಪಾಲ್, ಸದ್ಯಸರು (ಶಾಂತಿನಗರ), ಶಾಂತಿನಗರ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ನಿಯಮಿತವಾಗಿ ನಿಗಧಿತ ಅವಧಿಯಲ್ಲಿ ಉರಿಯುವಂತೆ ಕ್ರಮವಹಿಸಲು ತಿಳಿಸಲಾಗಿ, ಅದರಂತೆ ಬಿ.ಬಿ.ಎಂ.ಪಿಯ ವಿದ್ಯುತ್ ಇಲಾಖೆರವರು ಸೂಕ್ತ ಕ್ರಮಕೈಗೊಳ್ಳಲಾವುದೆಂದು ತಿಳಿಸಿದರು. | AEE & A.E<br>(BBMP-Electrical) |

Scanned with CamScanner

| | | |
|---|---|---|
| | ➡ ಶ್ರೀ ಜಗದೀಶ್, ಸದ್ಯಸರು (ಶಾಂತಿನಗರ) ರವರು ತಮ್ಮ ಪತ್ರದಲ್ಲಿ – ಶಾಂತಿನಗರ ವಾರ್ಡ್ ವ್ಯಾಪ್ತಿಯಲ್ಲಿ ಮರ ನೆಡುವ ಕಾರ್ಯಕ್ರಮಗಳು ಕೈಗೊಳ್ಳಲಾಗಿದ್ದು, ಸದರಿ ವಿಷಯದ ಗುತ್ತಿಗೆದಾರರ ಹಾಗೂ ಇತರೆ ಬಗ್ಗೆ ಮಾಹಿತಿ ನೀಡಲು ತಿಳಿಸಲಾಗಿ , ಅದರಂತೆ ಬಿ.ಬಿ.ಎಂ.ಪಿಯ ಅರಣ್ಯ ಇಲಾಖೆರವರು ಸೂಕ್ತ ಕ್ರಮಕೈಗೊಳ್ಳಲಾವುದೆಂದು ತಿಳಿಸಿದರು.<br>➡ ಸಾರ್ವಜನಿಕರ ದೂರು– ವಾಲ್ಕರ್ ಲೇನ್ ರಸ್ತೆಯಲ್ಲಿ ಬೃಹತ್ ಗಾತ್ರದ ಮರದ ಬೇರೊಂದು ಖಾಸಗಿ ಕಟ್ಟಡದ ಒಳಗೆ ಬೆಳೆದು ಕಟ್ಟಡಕ್ಕೆ ಹಾನಿ ಉಂಟು ಮಾಡುವುದಾಗಿ ತಿಳಿಸಲಾಗಿ, ಅದರಂತೆ ಬಿ.ಬಿ.ಎಂ.ಪಿಯ ಅರಣ್ಯ ಇಲಾಖೆರವರು ಸೂಕ್ತ ಕ್ರಮಕೈಗೊಳ್ಳಲಾವುದೆಂದು ತಿಳಿಸಿದರು | DCF-Forest BBMP |
| 6 | ಘನತ್ಯಾಜ್ಯಾ ನಿರ್ವಹಣೆ (SWM) ಇಲಾಖೆ | |
| | ➡ ಶ್ರೀ ವಿಲಿಯಮ್ ರಾಜೀವ್, ರವರು ತಮ್ಮ ಪತ್ರದಲ್ಲಿ– ವಾಲ್ಕರ್ ಲೇನ್ ರಸ್ತೆಯಲ್ಲಿ ತ್ಯಾಜ್ಯಾ ಸಂಗ್ರಹಣೆ ಸರಿಯಾಗಿ ಆಗದೆ ಇರುವ ಬಗ್ಗೆ ಹಾಗೂ ಇತರೆ ಗಿಡಗಳನ್ನು ತೆರವುಗೊಳಿಸುವ ಬಗ್ಗೆ. | AEE & A.E (SWM) |
| 7 | ಸಂಚಾರ ಪೊಲೀಸ್ ಠಾಣೆ (Traffic Police Station) | |
| | ➡ ಶ್ರೀಮತಿ ಸುನೀತಾ ವಾಸುದೇವ ರವರು ಮಾತನಾಡುತ್ತಾ– ನಾರಿಸ್ ರಸ್ತೆಯಲ್ಲಿ ಸುತ್ತಮುತ್ತ ಗಾಡಿಗಳನ್ನು ಪಾರ್ಕಿಂಗ್ ಮಾಡುವ ಬಗ್ಗೆ. | C.I/PS.I (Traffic Police) |

ಅಂತಿಮವಾಗಿ ಅಧ್ಯಕ್ಷರು ಮಾತನಾಡುತ್ತಾ ಸಾರ್ವಜನಿಕರಿಂದ ಹಾಗೂ ಕಮಿಟಿ ಸದಸ್ಯರುಗಳಿಂದ ದೂರನ್ನು ಸ್ವೀಕರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸಲು ಕೋರುತ್ತಾ, ಮುಂದಿನ ಸಭೆಯಷ್ವರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ತಿಳಿಸಲು ಕೋರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸದ್ಯಸರುಗಳಿಗೆ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸದ್ಯಸರುಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು
ವಾರ್ಡ್ –117 ಶಾಂತಿನಗರ

ಅಧ್ಯಕ್ಷರು ಮತ್ತು
ನೋಡಲ್ ಅಧಿಕಾರಿ
ವಾರ್ಡ್ –117 ಶಾಂತಿನಗರ

ಪ್ರತಿಗಳನ್ನು :–

1) ಮಾನ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2) ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4) ವಲಯ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.
6) ಆರೋಗ್ಯಾಧಿಕಾರಿಗಳು, ಶಾಂತಿನಗರ, ರವರ ಅವಗಾಹನೆಗೆ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ಉಪ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ (ಘನತ್ಯಾಜ್ಯಾ ನಿರ್ವಹಣೆ) ಉಪ ವಿಭಾಗ, ರವರ ಅವಗಾಹನೆಗೆ ಸಲ್ಲಿಸುತ್ತಾ, ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳು ಇದ್ದಲ್ಲಿ ದೂರುಗಳ ಬಗ್ಗೆ ಕೈಗೊಂಡ ಕ್ರಮ ಕುರಿತು ಅನುಸರಣಾ ವರದಿಯನ್ನು ನೀಡುವುದು.
9) ಸಹಾಯಕ ಕಂದಾಯ ಅಧಿಕಾರಿಗಳು, ಶಾಂತಿನಗರ, ಉಪ ವಿಭಾಗ, ರವರ ಅವಗಾಹನೆಗೆ ಸಲ್ಲಿಸುತ್ತಾ, ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳು ಇದ್ದಲ್ಲಿ ದೂರುಗಳ ಬಗ್ಗೆ ಕೈಗೊಂಡ ಕ್ರಮ ಕುರಿತು ಅನುಸರಣಾ ವರದಿಯನ್ನು ನೀಡುವುದು.
10) ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರ ಅವಗಾಹನೆಗೆ ಸಲ್ಲಿಸುತ್ತಾ, ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳು ಇದ್ದಲ್ಲಿ ದೂರುಗಳ ಬಗ್ಗೆ ಕೈಗೊಂಡ ಕ್ರಮ ಕುರಿತು ಅನುಸರಣಾ ವರದಿಯನ್ನು ನೀಡುವುದು.
12) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ರವರ ಅವಗಾಹನೆಗೆ ಸಲ್ಲಿಸುತ್ತಾ, ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳು ಇದ್ದಲ್ಲಿ ದೂರುಗಳ ಬಗ್ಗೆ ಕೈಗೊಂಡ ಕ್ರಮ ಕುರಿತು ಅನುಸರಣಾ ವರದಿಯನ್ನು ನೀಡುವುದು.
13) ಆಡುಗೋಡಿ/ಅಶೋಕನಗರ, ಟ್ರಾಫೀಕ್ ಮತ್ತು ಲಾ & ಆರ್ಡರ್ ಪೊಲೀಸ್ ಇಲಾಖೆ, ರವರ ಅವಗಾಹನೆಗೆ ಸಲ್ಲಿಸುತ್ತಾ, ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳು ಇದ್ದಲ್ಲಿ ದೂರುಗಳ ಬಗ್ಗೆ ಕೈಗೊಂಡ ಕ್ರಮ ಕುರಿತು ಅನುಸರಣಾ ವರದಿಯನ್ನು ನೀಡುವುದು.
14) ಕಛೇರಿ ಕಡತಕ್ಕೆ.

Scanned with CamScanner